# 4th India-New Zealand Foreign Ministry Consultations

June 23, 2022

---

## 4 ನೇ ಭಾರತ-ನ್ಯೂಜಿಲೆಂಡ್ ವಿದೇಶಾಂಗ ಸಚಿವಾಲಯದ ಸಮಾಲೋಚನೆಗಳು

ಜೂನ್ 23, 2022

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ 4 ನೇ ವಿದೇಶಾಂಗ ಸಚಿವಾಲಯದ ಸಮಾಲೋಚನೆಗಳು 23 ಜೂನ್ 2022 ರಂದು ನವದೆಹಲಿಯಲ್ಲಿ ನಡೆಯಿತು. ಶ್ರೀ ಸೌರಭ್ ಕುಮಾರ್, ಕಾರ್ಯದರ್ಶಿ (ಪೂರ್ವ) ಅವರು ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದರು, ನ್ಯೂಜಿಲೆಂಡ್ ತಂಡವನ್ನು ಶ್ರೀ ಮಾರ್ಕ್ ಸಿಂಕ್ಲೇರ್ ಉಪ ಕಾರ್ಯದರ್ಶಿ, ಅಮೇರಿಕಾ ಮತ್ತು ಏಷ್ಯಾ ಗ್ರೂಪ್, ವಿದೇಶಾಂಗ ವ್ಯವಹಾರ ಮತ್ತು ವ್ಯಾಪಾರ ಸಚಿವಾಲಯ ಅವರು ಮುನ್ನಡೆಸಿದರು,

2. ವ್ಯಾಪಾರ ಮತ್ತು ಹೂಡಿಕೆ, ರಕ್ಷಣೆ ಮತ್ತು ಭದ್ರತೆ, ಎರಡು ದೇಶಗಳ ಜನರ ನಡುವಿನ ಸಂಬಂಧಗಳು, ಭಯೋತ್ಪಾದನೆ ನಿಗ್ರಹ, ಸೈಬರ್ ಭದ್ರತೆ ಮತ್ತು ನಿರಸ್ತ್ರೀಕರಣ ಸೇರಿದಂತೆ ಅಸ್ತಿತ್ವದಲ್ಲಿರುವ ಸೌಹಾರ್ದಯುತ ಮತ್ತು ಸ್ನೇಹಪರ ದ್ವಿಪಕ್ಷೀಯ ಸಂಬಂಧಗಳನ್ನು ಪರಿಶೀಲಿಸಿದ ಎರಡೂ ಕಡೆಯವರು ಸಂಬಂಧವನ್ನು ಮತ್ತಷ್ಟು ಹೆಚ್ಚಿಸಲು ಮತ್ತು ವಿವಿಧ ಕ್ಷೇತ್ರಗಳಲ್ಲಿ ಬಾಂಧವ್ಯವನ್ನು ಗಾಢವಾಗಿಸಲು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

3. ವಿದೇಶಾಂಗ ಸಚಿವಾಲಯದ ಸಮಾಲೋಚನೆಗಳು ಪರಸ್ಪರ ಆಸಕ್ತಿಯ ಸಮಕಾಲೀನ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶವನ್ನು ಒದಗಿಸಿದೆ. ಈ ಪ್ರದೇಶದಲ್ಲಿ ನಿಕಟ ಸಹಕಾರದ ಅಗತ್ಯವನ್ನು ಎತ್ತಿ ತೋರಿಸುತ್ತಾ, ಎರಡೂ ಕಡೆಯವರು ಮುಕ್ತ, ತೆರದ, ಅಂತರ್ಗತ ಮತ್ತು ಸ್ಥಿರವಾದ ಇಂಡೋ-ಪೆಸಿಫಿಕ್‌ನ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿದರು. ಪ್ರಾದೇಶಿಕ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ಸಮನ್ವಯವನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚೆಗಳನ್ನು ನಡೆಸಲಾಯಿತು.

**ನವ ದೆಹಲಿ**

**23 ಜೂನ್ 2022**

DISCLAIMER: This is an approximate translation. The original is available in English on MEA's website and may be referred to as the official press release.